ಉಚ್ಚ ನ್ಯಾಯಾಲಯದಲ್ಲಿರತಕ್ಕ ಮೊಕದ್ದಮೆಗಳ ಇತ್ಯರ್ಥದ ಬಗ್ಗೆ

3293 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇದುವರೆವಿಗೂ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳೆಷ್ಟು?

ಆ) ಅವುಗಳಲ್ಲಿ ಐದು ವರ್ಷಗಳಿಗಿಂತ ಹಿಂದಿನ ಮೊಕದ್ದಮೆಗಳೆಷ್ಟು?

ಇ) ಹುಬ್ಬಳ್ಳಿಯಲ್ಲಿ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡಲು ಸರ್ಕಾರದವರಿಗೆ ವಕೀಲರ ಸಂಘಗಳಿಂದ ಕೋರಿಕೆ ಬಂದಿರುವುದೇ?

ಈ) ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಉ) ಉಚ್ಚ ನ್ಯಾಯಾಲಯದಲ್ಲಿ ಒಟ್ಟು ಇರಬೇಕಾಗಿರುವ ನ್ಯಾಯಾಧೀಶರ ಸಂಖ್ಯೆ ಎಷ್ಟು?

ಊ) ಕಡಿಮೆ ಇದ್ದಲ್ಲಿ ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಉಚ್ಚ ನ್ಯಾಯಾಲಯವು ರಾಜ್ಯ ವಿಧಾನ ಮಂಡಲಕ್ಕೆ ಯಾವ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ.

ಆ) ಉತ್ತರ ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯದ ಪೀಠ ಪ್ರಾರಂಭಿಸಬೇಕೆಂಬ ಬಗ್ಗೆ ಕೋರಿಕೆಗಳು ಸರ್ಕಾರಕ್ಕೆ ಬಂದಿವೆ.

ಇ) ಉಚ್ಚ ನ್ಯಾಯಾಲಯದ ಪೀಠವನ್ನು ಅದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಅದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಒಪ್ಪಿಗೆ ನೀಡಿಲ್ಲ. ಉಚ್ಚ ನ್ಯಾಯಾಲಯದ ಒಪ್ಪಿಗೆಯಿಲ್ಲದೆ ಸರ್ಕಾರ ಈ ಬಗ್ಗೆ ಯಾವ ಮುಂದಿನ ಕ್ರಮ ಕೈಗೊಳ್ಳುವಂತಿಲ್ಲ. ಸದರಿ ಸಂಪ್ರದಾಯದ ನಿರ್ಣಯದಂತೆ ಮತ್ತು ವಿಷಯವನ್ನು ಮುಖ್ಯ ನ್ಯಾಯಾಧೀಶರೊಂದಿಗೆ ಚರ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಉಪಪ್ರಶ್ನೆ (ಅ) ಮತ್ತು (ಆ)ಗೆ ನೀಡಿರುವಂತೆ.

ಸೆಕೆಂಡ್ಸ್ ಮದ್ಯದ ಹಾವಳಿ ತಡೆಗಟ್ಟುವಿಕೆ

3153 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಅಬ್ಕಾರಿ ನೀತಿಯ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸುತ್ತೇವೆಂದು ಹೇಳಿ ಇದುವರೆವಿಗೂ ಶ್ವೇತ ಪತ್ರವನ್ನು ಹೊರಡಿಸದಿರಲು ಕಾರಣವೇನು?

ಆ) ಸೆಕೆಂಡ್ ಮದ್ಯದ ಹಾವಳಿ ಧಾರಾಳವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಕೈಗೊಂಡಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) ಅಬ್ಕಾರಿ ನೀತಿಯ ಬಗ್ಗೆ ಶ್ವೇತಪತ್ರ ಹೊರಡಿಸುವ ಯಾವ ಪ್ರಸ್ತಾವನೆಯೂ ಸರಕಾರದ ಪರಿಶೀಲನೆಯಲ್ಲಿಲ್ಲ.

ಆ) ಇಲ್ಲ.

ಇ) ಅಂತಹ ಸಂದರ್ಭಗಳು ಕಂಡುಬಂದಾಗ ಸನ್ನದುಗಳನ್ನು ಸ್ಥಗಿತಗೊಳಿಸಲು ಹಾಗೂ ರದ್ದು ಮಾಡುವ ಕ್ರಮಗಳ ಜೊತೆಗೆ ಕಾನೂನು ರೀತ್ಯಾ ಮುಟ್ಟುಗೋಲು ನಡವಳಿಕೆಗಳನ್ನು ಮಾಡಲಾಗುತ್ತಿದೆ.

ಸಕಲೇಶಪುರ ಮತ್ತು ಯಳಸೂರು ಆಲೂರು ಸಬ್ ಇನ್ಸ್‌ಪೆಕ್ಟರ್‌ಗಳಿಗೆ ವಾಹನಗಳನ್ನೊದಗಿಸುವುದು

3195 - ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಯಸಳೂರು ಹಾಗೂ ಆಲೂರು ಮಲೆನಾಡು ಪ್ರದೇಶಗಳಾಗಿದ್ದು ಈ ಸ್ಥಳಗಳಲ್ಲಿರುವ ಪೋಲೀಸ್ ಠಾಣೆಗಳ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ವಾಹನಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಾಹನಗಳನ್ನು ಕೊಡುವ ಯೋಜನೆ ಇದೆಯೇ? ಇದ್ದಲ್ಲಿ ಎಂದಿನಿಂದ ಕೊಡಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

ಅ) ಇಲ್ಲ. ಅದರ ಈ ಅಗತ್ಯತೆಯ ಬಗ್ಗೆ ಮಾನ್ಯ ಸದಸ್ಯರು ಗೃಹ ಸಚಿವರಿಗೆ ತಿಳಿಸಿದ್ದಾರೆ.

ಆ) ಆದ್ಯತೆ, ಅಗತ್ಯತೆ, ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಅನುಸರಿಸಿ ಪರಿಶೀಲಿಸಲಾಗುವುದು.

ಕರ್ನಾಟಕ ಮುನಿಸಿಪಲ್ ಆಡಳಿತ ನಿಯಮಗಳ ಬಗ್ಗೆ

3139 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮುನಿಸಿಪಲ್ ಆಡಳಿತ ಸೇವಾ ನಿಯಮಗಳನ್ನು ಎಂದಿನಿಂದ ಜಾರಿಗೆ ತರಲಾಯಿತು?

ಆ) ಈ ನಿಯಮಾವಳಿ ಜಾರಿಗೆ ಬಂದ ಮೇಲೆ ಎಷ್ಟು ಜನ ನೌಕರರಿಗೆ ಪುರಸಭೆ ಮುಖ್ಯ ಅಧಿಕಾರಿಗಳಾಗಿ ಬಡ್ತಿ ಕೊಡಲಾಯಿತು?

ಇ) ಹಾಲಿ ಎಷ್ಟು ಪುರಸಭೆ ಮುಖ್ಯಾಧಿಕಾರಿ ಹುದ್ದೆಗಳು ಖಾಲಿ ಇವೆ. ಅವುಗಳನ್ನು ತುಂಬಲು ಅನುಸರಿಸುತ್ತಿರುವ ನೀತಿ ಏನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 1-9-1970.

ಆ) ಯಾರಿಗೂ ಬಡ್ತಿ ಕೊಟ್ಟಿಲ್ಲ.

ಇ) 62 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ತುಂಬಲಾಗುತ್ತಿದೆ.